ಕರ್ನಾಟಕ ಸರ್ಕಾರ

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ - 571313
ದೂರವಾಣಿ : ಕಛೇರಿ : 08226-226229
ಇ-ಮೇಲ್ : chncirccf@gmail.com

ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ (ಪ್ರಾದೇಶಿಕ), ಚಾಮರಾಜನಗರ

ಸಂಖ್ಯೆ: ಸಿ1/ಲ್ಯಾಂಡ್/FC-60759/2020/2022-23 ದಿನಾಂಕ: 03.11.2022

(ಅಡಕ : 05 ಪ್ರತಿಗಳು + 04 ಸೆಟ್ ಪ್ರಸ್ತಾವನೆ).

ಗೆ,

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
(ಅರಣ್ಯ ಸಂರಕ್ಷಣೆ),
ಅರಣ್ಯ ಭವನ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
**ಬೆಂಗಳೂರು.**

ಮಾನ್ಯರೇ,

ವಿಷಯ : Laying of Jio Optical Fiber Cable along the right of way in NH-PWD Road from Cowdally-M.M.Hills WL-Kuratti-Cauvery WL- Dantalli & Ramapura-Ajjipura-M.M.Hills-DM Samudra in Hanur Taluk of Chamarajanagara Dist. Proposal No: FP/KA/OFC/60759/2020.

ಉಲ್ಲೇಖ : 1. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಪತ್ರ ಸಂಖ್ಯೆ: ಎ4/ಲ್ಯಾಂಡ್/FC/ಫೈ.ಕೇಬಲ್/ವಿವ-11/2022-23 ದಿನಾಂಕ: __.09.2022.

2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಪತ್ರ ಸಂಖ್ಯೆ: ಬಿ2/ಲ್ಯಾಂಡ್/ಇತರೆ/ಸಿಆರ್-04/2021-22 ದಿನಾಂಕ: 28.10.2022.

*****

ವಿಷಯಕ್ಕೆ ಸಂಬಂಧಿಸಿದಂತೆ, ಕಾವೇರಿ ವನ್ಯಜೀವಿ ವಿಭಾಗ ಹಾಗೂ ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಅರಣ್ಯ ಪ್ರದೇಶಗಳಲ್ಲಿ Jio Optical Fiber Cable ಅಳವಡಿಸಲು Jio Digital Fiber Pvt., Ltd., Bangalore ರವರು PARIVESH Web Portal ನಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರು ಸ್ಥಳ ಪರಿಶೀಲಿಸಿ ಮೇಲ್ಕಂಡ ಯೋಜನೆಗೆ ಅನುಮತಿ ನೀಡುವ ಸಂಬಂಧ ಪ್ರಸ್ತಾವನೆಯನ್ನು ತಲಾ 05 ಸೆಟ್ ಗಳೊಂದಿಗೆ ಉಲ್ಲೇಖ (1) ಮತ್ತು (2) ರಲ್ಲಿ ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಪ್ರಸ್ತಾವನೆಯು 0.345 Ha. ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಅರಣ್ಯ ಪ್ರದೇಶ ಹಾಗೂ 0.108 Ha. ಕಾವೇರಿ ವನ್ಯಜೀವಿ ವಿಭಾಗ ವ್ಯಾಪ್ತಿಯ ಅರಣ್ಯ ಪ್ರದೇಶ ಸೇರಿ ಒಟ್ಟು 0.453 Ha. ಪ್ರದೇಶವನ್ನು ಒಳಗೊಂಡಿದ್ದು, ಪ್ರಸ್ತಾಪಿತ ಕೇಬಲ್ ಅಳವಡಿಕೆ ಮಾರ್ಗವು ರಸ್ತೆ ಬದಿಯಲ್ಲಿ ಹಾದು ಹೋಗುತ್ತಿರುವುದರಿಂದ ಅರಣ್ಯ ಮತ್ತು ವನ್ಯಜೀವಿ ಸಂಕುಲಕ್ಕೆ ಹಾನಿಯಾಗುವ ಸಂಭವ ಅತೀ ಕಡಿಮೆ ಇರುವುದರಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಅಂಗೀಕರಿಸಬಹುದೆಂಬ ಶಿಫಾರಸ್ಸಿನೊಂದಿಗೆ ಉಲ್ಲೇಖ ಪತ್ರದ ಪ್ರತಿ ಹಾಗೂ ಎಲ್ಲಾ ದಾಖಲೆಗಳನ್ನು (04 ಸೆಟ್ ಗಳೊಂದಿಗೆ) ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ. ಹಾಗೂ ಆನ್ ಲೈನ್ ಮುಖಾಂತರವು ಪ್ರಸ್ತಾವನೆಯನ್ನು ತಮ್ಮ ಕಛೇರಿಗೆ ವರ್ಗಾಯಿಸಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಗೌರವಗಳೊಂದಿಗೆ

ತಮ್ಮ ನಂಬುಗೆಯ,

Received (Original 4 Sets)

ದಿನಾಂಕ 3/11/2022 ರಂದು ರವಾನಿಸಲಾಗಿದೆ
ವಿ.ವಿ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಪ್ರಾದೇಶಿಕ),
O/C ಚಾಮರಾಜನಗರ.

3/11/22

✓ ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಮತ್ತು ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.